


ಚಿತ್ರ: ಮಂಜುನಾಥ ಎಂ.ಎಸ್

ದಕ್ಷಿಣೆ! ಲಾಯರ್, ಕಂಟ್ರಾಕ್ಟರ್, ಎಂಜಿನಿಯರ್‌ಗಳಿಗೆ ಸಾವಿರ, ಲಕ್ಷದ ಲೆಕ್ಕದಲ್ಲೇ ಫೀಸು. ಇನ್ನು ರಾಜಕಾರಣಿಗಳು, ಸಿನಿಮಾ ತಾರೆಯರ ದುಡಿಮೆ ಕೋಟಿಗಳಲ್ಲಿ!

ಫೀಸು ಜಾಸ್ತಿ ಅಂತನ್ನಿಸಿದರೆ ಖಾಸಗಿ ವೈದ್ಯರಲ್ಲಿ ಏಕೆ ಹೋಗಬೇಕು? ಸರಕಾರಿ ಆಸ್ಪತ್ರೆ ಅಥವಾ ವೈದ್ಯಕೀಯ ಕಾಲೇಜುಗಳಿಗೆ ಹೋಗಬಹುದಲ್ಲವೇ? ಅಲ್ಲಿ ಹೋದರೆ, ವ್ಯವಸ್ಥೆ ಸರಿಯಿಲ್ಲ, ಮದ್ದು ಇಲ್ಲ, ಜನ ಜಾಸ್ತಿ, ಸ್ವಚ್ಛತೆ ಇಲ್ಲ ಎನ್ನುವ ನೂರಾರು ದೂರುಗಳು. ಸರ್ಕಾರಿ ಆಸ್ಪತ್ರೆಗಳನ್ನು ಸರಿ ಮಾಡುವುದು ವೈದ್ಯರ ಜವಾಬ್ದಾರಿಯೇ? ಜನಪ್ರತಿನಿಧಿಗಳು ಏಕಿರುವುದು? ಆಸ್ಪತ್ರೆಗಳಿಗೆ ಬೇಕಾದ ಮೂಲ ಸೌಲಭ್ಯಗಳನ್ನು ಒದಗಿಸಿಕೊಟ್ಟು ವ್ಯವಸ್ಥಿತವಾಗಿ ಇರುವಂತೆ ನೋಡಿಕೊಳ್ಳುವುದಕ್ಕಲ್ಲವೆ? ಈ ಜನಪ್ರತಿನಿಧಿಗಳ ವೈಫಲ್ಯವನ್ನು ವೈದ್ಯರ ತಲೆಗೇಕೆ ಕಟ್ಟುತ್ತೀರಿ ಸ್ವಾಮಿ?

ಖಾಸಗಿ ಆಸ್ಪತ್ರೆಗಳಲ್ಲಿ ಅತ್ಯಾಧುನಿಕ ಸೌಲಭ್ಯ, ಸ್ವಚ್ಛತೆ, ಸಾಕಷ್ಟು ಸಿಬ್ಬಂದಿ ಎಲ್ಲವನ್ನೂ ನಿರ್ವಹಣೆ ಮಾಡಲು ದುಡ್ಡು ಬೇಕು. ರಸ್ತೆ ಬದಿಯ ಗಾಡಿಯಲ್ಲಿ ಕುಡಿಯುವ ಚಹಾಕ್ಕೂ, ಪಂಚತಾರಾ ಹೋಟೆಲ್ಲಿನ ಚಹಾಕ್ಕೂ ಒಂದೇ ದರ ಇಡಬೇಕು ಎಂದು ಯಾರಾದರೂ ಒತ್ತಾಯಿಸಿದ್ದಾರಾ? ವೈದ್ಯರೂ ಈ ಸಮಾಜದಲ್ಲಿ ಎಲ್ಲರಂತೆ ದುಡಿದು ತಿನ್ನುವವರೇ. ಅವರಿಗೂ ಹೆಂಡತಿ ಮಕ್ಕಳು ಇಷ್ಟಾನಿಷ್ಟಗಳಿವೆ. ಖಾಸಗಿ ಬದುಕಿನ ಸಮಯವನ್ನೂ ರೋಗಿಗಳಿಗೆ ಮೀಸಲಿಟ್ಟು ದುಡಿಯುವ ವೈದ್ಯರಿಗೆ, ಸಂಪಾದನೆ ಮಾಡುವ ಹಕ್ಕೇ ಇಲ್ಲ ಎನ್ನುವಂತೆ ಕಡೆಗಣ್ಣಿನಿಂದ ನೋಡುವಿರೇಕೆ?

### ಆರೋಪ 2: ವೈದ್ಯರು ಕ್ರೂರಿಗಳು. ತಾಳ್ಮೆ, ಸಹನೆ ಒಂದೂ ಇಲ್ಲ. ಜೀವ ತೆಗೆಯುವ ನರಹಂತಕರು. ಕೊಬ್ಬು ಜಾಸ್ತಿ!

★ ಸಾರಾಸಗಟಾಗಿ ಎಲ್ಲ ವೈದ್ಯರ ಮೇಲೆ ಇಂತಹ ಆರೋಪ ಹೊರಿಸುವ ಮುನ್ನ ಆಲೋಚಿಸಿ– ರೋಗಿಗಳನ್ನು ಹಿಂಸಿಸಿ ಕೊಲ್ಲಲೆಂದೇ ನಾವು ಇಷ್ಟು ಕಷ್ಟಪಟ್ಟು ಓದಿ ವೈದ್ಯರಾಗಬೇಕೆ? ರೋಗಿ ಗುಣಮುಖನಾದರೆ ಹೆಸರು ಬರುವುದು ವೈದ್ಯರಿಗೇ ಅಲ್ಲವೆ? ಒಳ್ಳೆಯ ಹೆಸರು ಬೇಡ ಎಂದು ಯಾವ ವೈದ್ಯರಿಗಾದರೂ ಮನಸ್ಸಿನಲ್ಲಿ ಭಾವನೆ ಇರುತ್ತದೆಯೆ? ರೋಗಿಗಳ ಬಗ್ಗೆ ಅವರ ಸಂಬಂಧಿಕರಿಗೆ ಎಷ್ಟು ಕಾಳಜಿ ಇರುತ್ತದೋ ಅಷ್ಟೇ ಕಾಳಜಿ ವೈದ್ಯರಿಗೂ ಇರುತ್ತದೆ. ರೋಗಿ ಗುಣವಾದರೆ ತಾನೆ ವೈದ್ಯರಿಗೆ ತಮ್ಮ ಮೇಲೆ ತಮಗೆ ವಿಶ್ವಾಸ ಮೂಡುವುದು! ಹಾಗೆಂದು ಎಲ್ಲಾ ರೋಗಗಳೂ ವೈದ್ಯರ ನಿಯಂತ್ರಣದಲ್ಲಿ ಇರುತ್ತವೆಯೆ? ಅವರೂ ನಿಮ್ಮಂತೆ ಮನುಷ್ಯರಲ್ಲವೆ? ಅವರಿಂದ ತಪ್ಪುಗಳು ಸಂಭವಿಸಬಹುದು. ಆದರೆ ಬೇಕೆಂದೇ ಯಾವ ವೈದ್ಯರೂ ತಪ್ಪು ಮಾಡುವುದಿಲ್ಲ.

ನೀವು ನಿಮ್ಮ ವೈದ್ಯರನ್ನು ನಂಬಬೇಕು. ಅವರ ಜತೆ ಮುಕ್ತವಾಗಿ ಚರ್ಚಿಸಬೇಕು. ಯಾವುದನ್ನೂ ಮುಚ್ಚಿಡಲು ಪ್ರಯತ್ನಿಸಬೇಡಿ. ನಿಮ್ಮ ಕಷ್ಟಗಳ ಗೊಂದಲಗಳ ಬಗ್ಗೆ ಕೇಳಿ ತಿಳಿದುಕೊಳ್ಳಿ. ರೋಗದ ಬಗ್ಗೆ ಮಾಹಿತಿ ಕೇಳಿ ಪಡೆಯಿರಿ. ಆರೋಗ್ಯಕ್ಕೆ ಖರ್ಚು ಮಾಡಲು ಜಿಪುಣತನ ತೋರದಿರಿ. ಗುಣವಾಗದಿದ್ದರೆ ವೈದ್ಯನ ದಡ್ಡತನ, ನಿರ್ಲಕ್ಷ್ಯ. ಅದೇ ರೋಗ ಗುಣವಾದರೆ ಅದರ ಕ್ರೆಡಿಟ್ ಪೂರ್ತಿಯಾಗಿ ನೀವು ನಂಬಿದ ದೇವರಿಗೆ! ವೈದ್ಯರ ಪ್ರಯತ್ನ ಕೈಮೀರಿ ಸಾವು ಸಂಭವಿಸಿದಾಗ ಅದರ ಹೊಣೆಗಾರಿಕೆಯನ್ನೂ ದೇವರೇ ವಹಿಸಿಕೊಳ್ಳಬೇಕಲ್ಲವೆ? ವೈದ್ಯರ ತಲೆಗೇಕೆ ಕಟ್ಟುತ್ತೀರಿ? ಸಾವಿಗೆ ರೋಗ ಕಾರಣ; ಆ ರೋಗ ಲಕ್ಷಣಗಳ ವಿರುದ್ಧ ಹೋರಾಡೋಣ ಎಂದು ನಿಮಗೇಕೆ ಅನ್ನಿಸುವುದಿಲ್ಲ?

ಹೌದು, ಎಲ್ಲರೂ ವೈದ್ಯರನ್ನು ದೂರುವವರಲ್ಲ. ಈಗಲೂ ಸಹಸ್ರಾರು ಜನರು ವೈದ್ಯರ ಸೇವೆಯನ್ನು ಗುರುತಿಸಿ ಕೊಂಡಾಡುವವರು ಇದ್ದಾರೆ. ಸಾಕಷ್ಟು ರೋಗಿಗಳ ಪ್ರೀತಿ, ಹಾರೈಕೆ, ಆಶೀರ್ವಾದಗಳೂ ವೈದ್ಯರಿಗೆ ಸಿಗುತ್ತವೆ. ಆದರೆ ಸಾರ್ವಜನಿಕ ಚರ್ಚೆಯ ವಿಷಯ ಬಂದಾಗ ವೈದ್ಯರ ಬಗ್ಗೆ ನಮ್ಮ ಸಮಾಜದಲ್ಲಿ ಒಂದು ರೀತಿಯ ಅಸಹನೆ ಇತ್ತೀಚೆಗೆ ಬೆಳೆಯುತ್ತಿದೆ. ವಿಷಯವನ್ನು ಸಾಮಾನ್ಯೀಕರಿಸಿ ಇಡೀ ವೈದ್ಯ ಸಮುದಾಯವನ್ನೇ ಹೀಗಳೆಯುವುದು ಬೇಡ ಎನ್ನುವುದಷ್ಟೇ ನನ್ನ ಕಾಳಜಿ. ●